Kerala Gazette No. 25 dated 23rd June 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಫ್) ಇಲಾಖೆ

## ಅಧಿಸೂಚನೆ

ನಂಬ್ರ 24395/ಲೆಗ್. ಎಫ್2/2017/ಕಾನೂನು. *ತಿರುವನಂತಪುರಂ,* *2018 ಜುಲೈ 3,*
*1193 ಮಿಥುನ 19/*
*1940 ಆಷಾಢ 12.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2018 ಜುಲೈ 3ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 16ನೇ ಅಧಿನಿಯಮ

## 2018ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ

2003ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ—2003ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 8ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 37ನೇ ವಿಭಾಗಕ್ಕಿರುವ ತಿದ್ದುಪಡಿ.—2003ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ ಅಧಿನಿಯಮ (2003ರ 31) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 37ನೇ ವಿಭಾಗದಲ್ಲಿ ಉಪ-ವಿಭಾಗ (3)ರ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) ಯಾವುದೇ ವ್ಯಕ್ತಿಯು ಜಲ ವಿತರಣಾ ವ್ಯವಸ್ಥೆಗೆ ಅಥವಾ ಜಲ ಪ್ರವಾಹಕ್ಕೆ ತ್ಯಾಜ್ಯವನ್ನೋ ಅಥವಾ ಹೊಲಸನ್ನೋ ಅಥವಾ ಮಲವನ್ನೋ ಅಥವಾ ಯಾವುದೇ ಇತರ ತ್ಯಾಜ್ಯವಸ್ತುವನ್ನು ಹಾಕುವುದೋ ಅಥವಾ ಹಾಕುವಂತೆ ಮಾಡುವುದೋ ಅಥವಾ ಅದಕ್ಕೆ ಕೊಳಚೆ ನೀರನ್ನು ಹರಿಯಬಿಡುವುದೊ ಅಥವಾ ಯಾವುದೇ ಇತರ ರೀತಿಯಲ್ಲಿ ನೀರನ್ನು ಮಲಿನಮಾಡುವುದೊ ಮಾಡತಕ್ಕದ್ದಲ್ಲ.".

3. 58ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 58ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ, (ಜೆ) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಕೆ) ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರ ಪದವಿಗಿಂತ ಕಡಿಮೆಯಲ್ಲದ ಒಬ್ಬ ಸರಕಾರ ನಾಮನಿರ್ದೇಶಿತ ಪೋಲೀಸ್ ಅಧಿಕಾರಿ.".

4. 59ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 59ನೇ ವಿಭಾಗದ (2)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ಪ್ರಾಧಿಕಾರದ ಒಂದು ಸಭೆಯ ಕ್ವಾರಂ ಚೇರ್‌ಮೇನನ್ನು ಒಳಗೊಂಡು ಐದು ಸದಸ್ಯರಾಗಿರತಕ್ಕದ್ದು.".

5. 70ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 70ನೇ ವಿಭಾಗದ (3)ನೇ ಉಪ-ವಿಭಾಗದ ಬದಲು, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(3) 7ನೇ ವಿಭಾಗ ಅಥವಾ 37ನೇ ವಿಭಾಗದ (3)ನೇ ಉಪ-ವಿಭಾಗ ಅಥವಾ (4)ನೇ ಉಪ-ವಿಭಾಗದ ಉಪ-ಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯನ್ನು, ಅಪರಾಧ ನಿರ್ಣಯತಿಯ ಮೇರೆಗೆ ಮೂರು ವರ್ಷಗಳ ಕಾಲಾವಧಿ ವರೆಗಿನ ಜೈಲು ಶಿಕ್ಷೆ ಅಥವಾ ಎರಡು ಲಕ್ಷ ರೂಪಾಯಿ ವರೆಗಿನ ದಂಡ ವಿಧಿಸಿ ಅಥವಾ ಅವೆರಡನ್ನೂ ಸೇರಿಸಿ ವಿಧಿಸಿ ಶಿಕ್ಷಿಸಲ್ಪಡತಕ್ಕದ್ದು.".

6. 70ಎ ಎಂಬ ಹೊಸ ವಿಭಾಗದ ಸೇರಿಸುವಿಕೆ.—ಪ್ರಧಾನ ಅಧಿನಿಯಮದ 70ನೇ ವಿಭಾಗದ ನಂತರ, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"70ಎ. ಮ್ಯಾಜಿಸ್ಟ್ರೇಟ್ ಅವರ ವಿಶೇಷ ಅಧಿಕಾರ ವ್ಯಾಪ್ತಿ.—1973ರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (1974ರ 2ನೇ ಕೇಂದ್ರ ಅಧಿನಿಯಮ)ಯ 29ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಪ್ರಕಾರದ ಅಪರಾಧಗಳಿಗೆ ಎರಡು ಲಕ್ಷ ರೂಪಾಯಿಗಳ ವರೆಗಿನ ದಂಡವನ್ನು ವಿಧಿಸುವ ಅಧಿಕಾರ ಒಂದು ಜುಡಿಶಿಯಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರರಿಗೆ ಇರುವುದಾಗಿದೆ.".

7. 72ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 72ನೇ ವಿಭಾಗದ (ಸಿ) ಖಂಡದಲ್ಲಿ "ಎರಡು ವರ್ಷಗಳು, ಆದರೆ ಅದು ಆರು ತಿಂಗಳಿಗಿಂತ ಕಡಿಮೆಯಲ್ಲದ ಮತ್ತು ಮೂವತ್ತೈದು ಸಾವಿರ ರೂಪಾಯಿ ವರೆಗಿನ ದಂಡದೊಂದಿಗೆ" ಎಂಬ ಪದಗಳ ಹಾಗೂ ಚಿಹ್ನೆಗಳ ಬದಲು "ಮೂರು ವರ್ಷಗಳು, ಆದರೆ ಅದು ಒಂದು ವರ್ಷಕ್ಕಿಂತ ಕಡಿಮೆಯಲ್ಲದ ಮತ್ತು ಎರಡು ಲಕ್ಷ ರೂಪಾಯಿವರೆಗಿನ ದಂಡದೊಂದಿಗೆ" ಎಂಬ ಪದಗಳನ್ನು ಹಾಗೂ ಚಿಹ್ನೆಗಳನ್ನು ಸೇರಿಸತಕ್ಕದ್ದು,

8. ರದ್ಧತಿ ಮತ್ತು ರಕ್ಷಣೆ.—(1) 2018ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ (ತಿದ್ದುಪಡಿ) ಅಧ್ಯಾದೇಶ (2018ರ 21)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.